ಕುಮಾರಿ ಶೋಭಾ ಕರಂದ್ಲಾಜೆ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):–

ಅ) ಸುವರ್ಣ ಗ್ರಾಮೋದಯ ಯೋಜನೆಯಡಿ ರಾಜ್ಯದ 1200 ಗ್ರಾಮಗಳನ್ನು ಆಯ್ಕೆ ಮಾಡಿ, 1190 ಗ್ರಾಮಗಳಲ್ಲಿ ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

1200 ಗ್ರಾಮಗಳಿಗೆ ರೂ. 1000.00 ಕೋಟಿ ಅನುದಾನ ನಿಗಧಿಪಡಿಸಲಾಗಿದೆ. ದಿನಾಂಕ : 30–06–2008ರವರೆಗೆ ಸದರಿ ಕಾರ್ಯಕ್ರಮದಡಿ ರೂ. 542.03 ಕೋಟಿ ಅನುದಾನ ಬಿಡುಗಡೆ ಮಾಡಿ ರೂ. 385.98 ಕೋಟಿ ವೆಚ್ಚ ಮಾಡಲಾಗಿದೆ.

ಆ) ಸ್ಥಳೀಯ ಚುನಾಯಿತ ಜನಪ್ರತಿನಿಧಿಗಳ ಶಿಫಾರಸ್ಸಿನನ್ವಯ ಹಾಗೂ ಹಿಂದುಳಿಕೆಗೆ ಒತ್ತು ನೀಡಿ ಸುವರ್ಣ ಗ್ರಾಮೋದಯ ಯೋಜನೆಯಡಿ ಮೊದಲನೇ ಪಟ್ಟಿಯಲ್ಲಿ ಆಯ್ಕೆ ಮಾಡಲಾದ ಹೆಬ್ರಿ ಚಾರ ಮತ್ತು ಕಣಜಾರು ಗ್ರಾಮಗಳನ್ನು ರದ್ದುಪಡಿಸಲಾಗಿದೆ.

ಇ) ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಹೆಬ್ರಿ ಚಾರ ಮತ್ತು ಕಣಜಾರು ಗ್ರಾಮಗಳ ಆಯ್ಕೆ ರದ್ದುಪಡಿಸಿರುವ ಬಗ್ಗೆ ದಾವೆ ಹೂಡಲಾಗಿದ್ದು, ಸದರಿ ದಾವೆಯನ್ನು ನ್ಯಾಯಾಲಯವು ಕಾನೂನಿನ ಪರಿಮಿತಿಯೊಳಗೆ ಪರಿಶೀಲಿಸುವಂತೆ ತಿಳಿಸಿ ದಾವೆಯನ್ನು ಇತ್ಯರ್ಥಗೊಳಿಸಿರುತ್ತದೆ. ತತ್ಸಂಬಂಧವಾಗಿ ಸದರಿ ಗ್ರಾಮಗಳನ್ನು ಮರು ಆಯ್ಕೆ ಮಾಡಿದರೆ ಆಯ್ಕೆ ಮಾಡಲಾದ ಎಲ್ಲಾ ಗ್ರಾಮಗಳಿಗೆ ಒದಗಿಸಬೇಕಾದ ತಲಾನುದಾನ ರೂ. 2352 ರಿಂದ ರೂ. 1442 ಗಳಿಗೆ ನಿಗಧಿಪಡಿಸಬೇಕಾಗುತ್ತದೆ. ಇದರಿಂದ ಅನುದಾನ ಹಂಚಿಕೆ ಕಡಿಮೆಯಾಗಿ ಗ್ರಾಮಾಭಿವೃದ್ಧಿಯು ಪೂರ್ಣಗೊಳ್ಳುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಹೆಬ್ರಿ, ಚಾರ ಮತ್ತು ಕಣಜಾರು ಗ್ರಾಮಗಳನ್ನು ಮರು ಆಯ್ಕೆ ಮಾಡಲು ಸಾಧ್ಯವಿಲ್ಲವೆಂದು ಅರ್ಜಿದಾರರಿಗೆ ಹಿಂಬರಹವನ್ನು ದಿನಾಂಕ : 21–09–2007ರ ಪತ್ರದಲ್ಲಿ ನೀಡಲಾಗಿದೆ.

46(97) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ :– ಮಾನ್ಯ ಇಂಧನ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ರಾಜ್ಯದಲ್ಲಿ ಬಡ ರೈತರ ವಿದ್ಯುತ್ ಪಂಪ್‌ಸೆಟ್‌ಗಳಿಗೆ ಉಚಿತವಾಗಿ ವಿದ್ಯುತ್ ಪೂರೈಸುವ ವಿಚಾರ ಸರ್ಕಾರದ ಮುಂದಿದೆಯೇ ;

ಆ) ಹಾಗಿದ್ದಲ್ಲಿ, ಇಲ್ಲಿಯವರೆವಿಗೆ ಕೈಗೊಂಡಿರುವ ಕ್ರಮಗಳೇನು ;

ಇ) ಉಚಿತವಾಗಿ ವಿದ್ಯುತ್ ಪೂರೈಸುವುದಾದಲ್ಲಿ ಯಾವ ಯಾವ ನಿಬಂಧನೆಗಳನ್ನು ವಿಧಿಸಲಾಗುವುದು ;

ಈ) ಉಚಿತವಾಗಿ ವಿದ್ಯುತ್ ಪೂರೈಸಲು ಮುಂದಾದಲ್ಲಿ ಇದಕ್ಕೆ ಅಗತ್ಯವಿರುವ ವಿದ್ಯುತ್ತಿನ ಪ್ರಮಾಣವೆಷ್ಟು ;

ಉ) ರಾಜ್ಯದಲ್ಲಿ ಪ್ರತಿದಿನ ಉತ್ಪಾದನೆಯಾಗುತ್ತಿರುವ ವಿದ್ಯುತ್ತಿನ ಪ್ರಮಾಣವೆಷ್ಟು; ಇದರಿಂದ ಸರ್ಕಾರದ ಬೊಕ್ಕಸಕ್ಕೆ ತಗಲುವ ವೆಚ್ಚವೆಷ್ಟು ;

ಊ) ಯಾವಾಗಿನಿಂದ ಈ ಯೋಜನೆಯನ್ನು ಜಾರಿಗೊಳಿಸಲಾಗುವುದು?

ಶ್ರೀ ಕೆ.ಎಸ್. ಈಶ್ವರಪ್ಪ (ಮಾನ್ಯ ಇಂಧನ ಸಚಿವರು):-

ಅ) ಮತ್ತು ಆ) ಹೌದು. ರಾಜ್ಯದ ರೈತರ 10 ಹೆಚ್.ಪಿ. ಸಾಮರ್ಥ್ಯದವರೆಗಿನ ನೀರಾವರಿ ಪಂಪುಸೆಟ್ಟು ಬಳಕೆದಾರರಿಗೆ ಉಚಿತ ವಿದ್ಯುತ್ ಸೌಲಭ್ಯವನ್ನು ದಿನಾಂಕ 01-08-2008 ರಿಂದ ಜಾರಿಗೊಳಿಸಲು ದಿನಾಂಕ 17-07-2008 ರಂದು ಸದನದಲ್ಲಿ ಮಂಡಿಸಲಾದ 2008-09ರ ಆಯವ್ಯಯ ಭಾಷಣದಲ್ಲಿ ಘೋಷಿಸಲಾಗಿದೆ.

ಇ) ಉಚಿತ ವಿದ್ಯುತ್ ಸೌಲಭ್ಯವನ್ನು ಪಡೆದುಕೊಳ್ಳಲು 10 ಹೆಚ್.ಪಿ. ಸಾಮರ್ಥ್ಯದವರೆಗಿನ ನೀರಾವರಿ ಪಂಪುಸೆಟ್ಟುಗಳಿಗೆ ಮೀಟರ್ ಅಳವಡಿಕೆ ಕಡ್ಡಾಯವಾಗಿರುತ್ತದೆ. ಸದ್ಯದಲ್ಲಿಯೇ ಈ ಸಂಬಂಧ ಸರ್ಕಾರಿ ಆದೇಶ ಹೊರಡಿಸಲಾಗುತ್ತಿದ್ದು, ಅದರಲ್ಲಿ ನಿಬಂಧನೆಗಳನ್ನು ಅಳವಡಿಸಲಾಗುವುದು.

ಈ) 10 ಹೆಚ್.ಪಿ. ವರೆಗಿನ ನೀರಾವರಿ ಪಂಪುಸೆಟ್ಟುಗಳಿಗೆ ಉಚಿತವಾಗಿ ವಿದ್ಯುತ್ ಸರಬರಾಜು ಮಾಡಲಾಗುವುದು. ಕಳೆದ ವರ್ಷವಾದ 2007-08 ರಲ್ಲಿ ನೀರಾವರಿ ಪಂಪುಸೆಟ್ಟುಗಳಿಂದ ಬಳಕೆಯಾದ ವಿದ್ಯುತ್ತಿನ ಪ್ರಮಾಣ ಸುಮಾರು 10,500 ದಶಲಕ್ಷ ಯೂನಿಟ್ಟುಗಳು.

ಉ) ಪ್ರಸ್ತುತ ರಾಜ್ಯದಲ್ಲಿ ಪ್ರತಿದಿನ ಉತ್ಪಾದನೆಯಾಗುತ್ತಿರುವ ಸರಾಸರಿ ವಿದ್ಯುತ್ತಿನ ಪ್ರಮಾಣ 100 ದಶಲಕ್ಷ ಯೂನಿಟ್ಟುಗಳು.

ಕಳೆದ ವರ್ಷವಾದ 2007-08 ರಲ್ಲಿ 40,195 ದಶಲಕ್ಷ ಯೂನಿಟ್ಟುಗಳ ವಿದ್ಯುತ್ ಖರೀದಿಗೆ ತಗುಲಿದ ಒಟ್ಟು ವೆಚ್ಚ ಸುಮಾರು 7,886 ಕೋಟಿ ರೂ.ಗಳು.

ಊ) ದಿನಾಂಕ 01-08-2008 ರಿಂದ ಜಾರಿಗೊಳಿಸಲಾಗುವುದು.

47(144) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಬೀದರ್) :- ಮಾನ್ಯ ವಸತಿ ಮತ್ತು ಮುಜರಾಯಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-